# ವಾರ್ತಾ ವಿಶ್ಲೇಷಣೆ

## ಐಟಿಗೆ ಈಟಿ

**ಮಾನವನ** ಸಾಮಾನ್ಯ ಲಕ್ಷಣ ಲೋಭ—ಎಲ್ಲವನ್ನೂ ತನ್ನದಾಗಿಸಿಕೊಳ್ಳುವ ಪ್ರವೃತ್ತಿ. ಇದರ ಪರಿಣಾಮವಾಗಿ ಕೆಲವರು ಎಲ್ಲ ಅಧಿಕಾರವನ್ನೂ ತಮ್ಮ ಹತ್ತಿರ ಇಟ್ಟುಕೊಳ್ಳಲು ಪ್ರಯತ್ನಿಸುತ್ತಾರೆ, ಎಲ್ಲ ಸಂಪತ್ತನ್ನು ತಮ್ಮದಾಗಿಸಿಕೊಳ್ಳಲು ಹವಣಿಸುತ್ತಾರೆ. ಇದು ಸಮಾಜದ ಒಟ್ಟು ಪ್ರಗತಿಗೆ ಮಾರಕವಾಗುತ್ತದೆ. ಇದರಿಂದಾಗಿ ಸಂಪತ್ತು ಎಷ್ಟೇ ಉತ್ಪತ್ತಿಯಾಗುತ್ತಿದ್ದರೂ ಬಡವರ ಸಂಖ್ಯೆ ಅಧಿಕವಾಗುತ್ತಲೇ ಹೋಗುತ್ತದೆ; ಜ್ಞಾನ ಎಷ್ಟೇ ವೃದ್ಧಿಯಾಗುತ್ತ ಹೋದರೂ ಅಜ್ಞಾನಿಗಳ ಸಂಖ್ಯೆ ಬಹುವಾಗುತ್ತಲೇ ಹೋಗುತ್ತದೆ.

ಮಾಹಿತಿ ತಂತ್ರಜ್ಞಾನದಿಂದ ದೇಶದ ಸಂಪತ್ತು ಅಧಿಕವಾಗುತ್ತದೆ, ಅದರ ಮೂಲಕ ಬಡತನ ನಿವಾರಣೆಯಾಗುತ್ತದೆ ಎಂದು ಹಿಂದೆ ಹೇಳಲಾಗುತ್ತಿತ್ತು. ಐಟಿ ಸಾಮ್ರಾಜ್ಯದ ಸಾರ್ವಭೌಮ ಬಿಲ್ ಗೇಟ್ಸ್ ಇದೇ ವಿಷಯವನ್ನು ಹೇಳುತ್ತಿದ್ದ. ಈಗ ಅವನಿಗೂ ಭ್ರಮನಿರಸನವಾಗಿದೆ. ಇತ್ತೀಚೆಗೆ ಕಂಪ್ಯೂಟರ್ ಪ್ರವೀಣರ ಸಮಾವೇಶವೊಂದರಲ್ಲಿ ಅವನು ಮಾಹಿತಿ ತಂತ್ರಜ್ಞಾನದ ಮೂಲಕ ಅತ್ಯಂತ ಪ್ರಸ್ತುತ ಸಮಸ್ಯೆಯಾದ ಬಡತನ ನಿವಾರಣೆಯಿಂದ ನಾವು ದೂರವಾಗುತ್ತಿದ್ದೇವೆ, ಬಡತನದಿಂದ ನರಳುತ್ತಿರುವ ಜಗತ್ತಿನ ಬಹುತೇಕ ಮಂದಿಗೆ ಕಂಪ್ಯೂಟರ್ ಯಾವ ಪ್ರಯೋಜನಕ್ಕೂ ಬರದು, ಎಂದು ಹೇಳಿದನಂತೆ. ಎಲ್ಲೋ ಕೆಲವರು ಜಗತ್ತಿನಲ್ಲಿಯೇ ಅತಿ ದೊಡ್ಡ ಶ್ರೀಮಂತರಾಗಿ ಬಡವರಿಗೆ ತಮ್ಮ ಹಣವನ್ನು ದಾನಮಾಡಿದ ಮಾತ್ರಕ್ಕೆ ಜಗತ್ತಿನ ಬಡತನ ನಿವಾರಣೆ ಯಾಗುವುದಿಲ್ಲ. ಸಂಪತ್ತನ್ನು ಉತ್ಪನ್ನ ಮಾಡುವ ತಂತ್ರಜ್ಞಾನ ಎಲ್ಲರಿಗೂ ತಲಪುವಂತಾಗಬೇಕು. ಇದಕ್ಕೆ ಶಿಕ್ಷಣ ಅಗತ್ಯ. ಇಲ್ಲಿ ಸ್ವಾಮಿ ವಿವೇಕಾನಂದರ ಶಿಕ್ಷಣ ಸಂದೇಶದ ಔಚಿತ್ಯವನ್ನು ಕಾಣುತ್ತೇವೆ.

ಇಂದಿನ ಜಾಗತೀಕರಣದ ಯುಗದಲ್ಲಿ ಯಾವುದೇ ತಾಂತ್ರಿಕತೆಯು ಹೆಚ್ಚು ಹೆಚ್ಚು ಪ್ರಗತಿಯನ್ನು ಸಾಧಿಸಬೇಕಾದರೆ ಹೆಚ್ಚು ಹೆಚ್ಚು ಜನರು ಅದರ ಪ್ರಯೋಜನವನ್ನು ಪಡೆಯುವಂತಾಗಬೇಕು. ಹಾಗಾಗಬೇಕಾದರೆ ಜಗತ್ತಿನಲ್ಲಿ ಬಡವರ ಸಂಖ್ಯೆ ಕಡಮೆಯಾಗಬೇಕು. ಬಡತನ ಸಮಸ್ಯೆಯನ್ನು ನಿವಾರಣೆ ಮಾಡದೆ ಯಾವುದೇ ಪ್ರಗತಿಯೂ ಸಾಧ್ಯವಿಲ್ಲ. ಸಾಧ್ಯವಾದರೂ ಬಹುಕಾಲ ಮುಂದುವರಿಯುವುದಿಲ್ಲ.

**ಐಟಿಗೆ ಈಟಿ ಇರಿದವನು ಬೇರೆ ಯಾರೂ ಅಲ್ಲ, ಐಟಿ ಸಾಮ್ರಾಜ್ಯದ ಸಾಮ್ರಾಟ್ ಬಿಲ್ ಗೇಟ್ಸ್!**

☆

## ಚೀನಾದ ಮುನ್ನಡೆ

**ಭಾರತ** ಮತ್ತು ಚೀನಾ ದೇಶಗಳು ನೆರೆಹೊರೆಯ ರಾಷ್ಟ್ರಗಳಾದರೂ ಸಂಪರ್ಕ ಮತ್ತು ಪರಸ್ಪರ ತಿಳಿವಳಿಕೆಯಲ್ಲಿ ಬಹುದೂರವಿರುವಂತಿದೆ. ಪುರಾತನ ಕಾಲದಲ್ಲಿ ಈ ಎರಡು ಬೃಹದ್‌ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಸಂಬಂಧವಿದ್ದುದು ಕಂಡುಬರುತ್ತದೆ. ಭಾರತ ಬೌದ್ಧಧರ್ಮವನ್ನು ಚೀನಾದೇಶಕ್ಕೆ ನೀಡಿತು. ಆದರೆ ಚೀನಾದಿಂದ ಭಾರತ ಏನನ್ನೂ ಸ್ವೀಕರಿಸಿರುವುದು ಕಂಡುಬರುವುದಿಲ್ಲ. ಕಾಗದ, ಸಕ್ಕರೆ ಮುಂತಾದ ಚೀನಾದಲ್ಲಾದ ಆವಿಷ್ಕಾರಗಳು ಪಶ್ಚಿಮ ದೇಶಗಳ ಮೂಲಕ ಭಾರತಕ್ಕೆ ಬಂತೇ ಹೊರತು ನೇರವಾಗಿ ಬರಲಿಲ್ಲ. 'ಹಿತ್ತಲ ಗಿಡ ಮದ್ದಲ್ಲ' ಎನ್ನುವುದು ನಿಜ.

ಈಗಲೂ ಭಾರತವು ಚೀನಾದ ಕಡೆ ಕಣ್ಣು ಮುಚ್ಚಿಕೊಂಡು ಕುಳಿತಿರುವಂತಿದೆ. ಅಲ್ಲಿ ಈಗ ಅತ್ಯಂತ ತ್ವರಿತ ಆರ್ಥಿಕ ಪ್ರಗತಿಯಾಗುತ್ತಿದೆ. ಇನ್ನು ಹತ್ತು ವರ್ಷಗಳಲ್ಲಿ ಅದು ಜಪಾನಿಗೆ ಸರಿಸಮವಾಗುವುದಂತೆ, ಮತ್ತು ಇಪ್ಪತ್ತು ವರ್ಷಗಳಲ್ಲಿ ಅಮೆರಿಕಕ್ಕೆ ಸಮವಾಗುವುದಂತೆ. ಅದರ ರಫ್ತು ಪ್ರಮಾಣ ೨೦೦ ಬಿಲಿಯನ್ ಡಾಲರುಗಳಾದರೆ ಭಾರತದ್ದು ಕೇವಲ ೫೦ ಬಿಲಿಯನ್ ಡಾಲರ್. ಇದು ಮಲೇಷಿಯಾ ಮತ್ತು ಇಂಡೋನೇಷಿಯಾ ದೇಶಗಳಿಗಿಂತಲೂ ಕಡಮೆ ಎಂದರೆ ನಾವೆಲ್ಲರೂ ನಾಚಿಕೆ ಪಟ್ಟುಕೊಳ್ಳಬೇಕು. ಚೀನಾ ೫೦೦ ಮಿಲಿಯನ್ ಟನ್ನುಗಳಷ್ಟು ಆಹಾರಧಾನ್ಯ ಬೆಳೆಯುತ್ತಿದ್ದರೆ ಭಾರತದ ಮೊತ್ತ ಕೇವಲ ೨೦೦ ಮಿಲಿಯನ್ ಟನ್. ಚೀನಾದ ವಿದೇಶೀ ವಿನಿಮಯ ಸಂಗ್ರಹ ೧೫೦ ಬಿಲಿಯನ್ ಡಾಲರ್. ಇದು ಭಾರತದ ನಾಲ್ಕು ಪಟ್ಟು. ಅಮೆರಿಕದಲ್ಲಿ ಶೇ.೫೦ ಆಟದ ಸಾಮಾನು ಮತ್ತು ಶೇ.೬೦ ಪಾದರಕ್ಷೆ ಚೀನಾದಿಂದ ಬರುತ್ತದೆ. ಅಮೆರಿಕದ ಯಾವುದೇ ಮಾರುಕಟ್ಟೆಗೆ ಹೋದರೂ ಅಲ್ಲಿ ಚೀನಾವಸ್ತುಗಳು ಲಭ್ಯ. ಚೀನಾದವರು ಅತ್ಯಂತ ಕಡಮೆ ಬೆಲೆಗೆ ಅತ್ಯುತ್ತಮ ಗುಣಮಟ್ಟದ ವಸ್ತುಗಳನ್ನು ತಯಾರಿಸುತ್ತಾರೆ. ತಾಂತ್ರಿಕತೆಯಲ್ಲಿ ಚೀನಾ ಭಾರತಕ್ಕಿಂತ ತುಂಬ ಮುಂದಿದೆ. ಅಲ್ಲಿ ಭಾರತಕ್ಕಿಂತ ಹೆಚ್ಚು ಸಂಶೋಧನ ವಿಜ್ಞಾನಿಗಳು, ಕಂಪ್ಯೂಟರ್ ಪ್ರವೀಣರು ಮತ್ತು ಭಾರತಕ್ಕೆ ಎರಡು ಪಟ್ಟು ಸಾಫ್ಟ್‌ವೇರ್ ಇಂಜಿನೀಯರುಗಳು ಇದ್ದಾರೆ.

ಅಭ್ಯುದಯ (ಆರ್ಥಿಕ ಮತ್ತು ಸಾಮಾಜಿಕ ಉನ್ನತಿ) ಮತ್ತು ನಿಃಶ್ರೇಯಸ (ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿ) ಇವೆರಡೂ ಆವಶ್ಯಕ. ಇವುಗಳಲ್ಲಿ ಒಂದಕ್ಕೆ ಮಾತ್ರ ಒತ್ತನ್ನು ನೀಡಿದರೆ ಎರಡನ್ನೂ ಕಳೆದುಕೊಳ್ಳುತ್ತೇವೆ. ಭಾರತ ಕೇವಲ ಆಧ್ಯಾತ್ಮಿಕತೆಗೆ ಹೆಚ್ಚು ಒತ್ತನ್ನು ನೀಡಿದುದರ ಪರಿಣಾಮವಾಗಿ ಅದು ಎರಡನ್ನೂ ಕಳೆದು ಕೊಂಡಿರುವುದಾಗಿ ಕಂಡುಬರುತ್ತದೆ. ☆